ನೇಮಕಾತಿ ಬಗ್ಗೆ

ಡಾ|| ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ) :-

34 (112) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಡಾ:ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ (ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮದ)ದಲ್ಲಿ ಇದುವರೆವಿಗೂ ನೇಮಕವಾಗಿರುವ ಅಧಿಕಾರಿ/ಸಿಬ್ಬಂದಿ ವರ್ಗದವರ ಸಂಖ್ಯೆ ಎಷ್ಟು; (ಇವರುಗಳ ಹೆಸರು, ನೇಮಕಾತಿಯಾದ ದಿನಾಂಕ ಮತ್ತು ಹುದ್ದೆವಾರು ವಿವರ ನೀಡುವುದು)

(ಆ) ಈ ನೇಮಕಾತಿಯಲ್ಲಿ ಮೀಸಲಾತಿ ಪದ್ಧತಿಯನ್ನು ಪಾಲನೆ ಮಾಡಲಾಗಿದೆಯೇ; ಇದ್ದಲ್ಲಿ, ಅಂತಹ ಅಧಿಕಾರಿ/ಸಿಬ್ಬಂದಿಗಳ ಹೆಸರು ಮತ್ತು ಹುದ್ದೆವಾರು ವಿವರ ನೀಡುವುದು ;

(ಇ) ನಿಗಮವು ಸ್ಥಾಪನೆಯಾದಾಗಿನಿಂದ ಈವರೆಗೂ ಚಾಲ್ತಿಯಲ್ಲಿರುವ ವೃಂದ ಮತ್ತು ನೇಮಕಾತಿ ನಿಯಮಾವಳಿ (ಕಾಲಕಾಲಕ್ಕೆ ಪರಿಷ್ಕೃತಗೊಂಡಿರುವುದು ಒಳಗೊಂಡಂತೆ) ಗಳ ಪ್ರತಿ ನೀಡುವುದು;

(ಈ) ವೃಂದ ಮತ್ತು ನೇಮಕಾತಿ ನಿಯಮಾವಳಿಗಳಲ್ಲಿ ನಿಗಧಿಪಡಿಸಿ ಅನುಪಾತದಂತೆ ಕಾಲಕಾಲಕ್ಕೆ ನೇರ ನೇಮಕಾತಿ ಮಾಡಲಾಗಿದೆಯೇ; ಹಾಗೂ ಅನುಪಾತದಂತೆ ಮುಂಬಡ್ತಿಯನ್ನು ನೀಡಲಾಗಿದೆಯೇ; ಇದ್ದಲ್ಲಿ, ವಿವರ ನೀಡುವುದು; ಇಲ್ಲದಿದ್ದಲ್ಲಿ, ನಿಯಮಾವಳಿಗಳನ್ನು ಪಾಲನೆ ಮಾಡದಿರಲು ಕಾರಣವೇನು? (ವಿವರ ನೀಡುವುದು)